ಅನುಬಂಧ-1

೧-೩-೮೬ ರಿಂದ ೧೦-೨-೮೯ರವರೆಗೆ **ಹರಿಜನರ** ಮೇಲೆ ನಡೆದ ದೌರ್ಜನ್ಯದ ಪ್ರಕರಣಗಳನ್ನು ತೋರಿಸುವ ಜಿಲ್ಲಾವಾರು ತಖ್ತೆ:

ಕ್ರಮ ಸಂಖ್ಯೆ	ಜಿಲ್ಲೆಗಳು	೧-೩-೮೬ ರಿಂದ ೩೧-೧೨-೮೯	೧೯೮೭	೧೯೮೮	೧-೧-೧೯೮೯ ರಿಂದ ೧೦-೨-೧೯೮೯
೧.	ಬೆಂಗಳೂರು ನಗರ	೩೧	—	೩	೧೦
೨.	ಬೆಂಗಳೂರು ಜಿಲ್ಲೆ	೩೯	೪೯	೧೦	೫
೩.	ಬೆಳಗಾಂ	೨೪	೨೯	೮	೯
೪.	ಬಳ್ಳಾರಿ	೧೫	೨೯	೧೨	೭
೫.	ಬೀದರ್	೭	೫೬	೧೩	೫
೬.	ಬಿಜಾಪುರ	೯	೩೮	೫೯	೬
೭	ಚಿಕ್ಕಮಗಳೂರು	—	೬	೧	—
೮	ಚಿತ್ರದುರ್ಗ	೨೨	೪೦	೨೩	೨
೯	ದಕ್ಷಿಣ ಕನ್ನಡ	೫	೧೩	೧೨	೩
೧೦	ಧಾರವಾಡ	೧೭	೧೭	೭	೨
೧೧	ಗುಲ್ಬರ್ಗಾ	೨೦	೨೯	೩೪	೧೪
೧೨	ಹಾಸನ	೧೦	೩೪	೯	—
೧೩	ಕೊಡಗು	೩೩	೧೯	೨೪	೩
೧೪	ಕೋಲಾರ	೫೬	೩೧	೪೮	೧೫
೧೫	ಕೆ.ಜಿ.ಎಫ್.	೧೨	೮	೧೪	೧
೧೬	ಮಂಡ್ಯ	೧೦	೨೦	೨೦	೮
೧೭	ಮೈಸೂರು	೨೯	೩೪	೩೮	೬
೧೮	ರಾಯಚೂರು	೩೯	೩೩	೩೯	೫
೧೯	ಶಿವಮೊಗ್ಗ	೧೩	೨	೨೩	೧
೨೦	ತುಮಕೂರು	೩೦	೨೨	೪೪	೧
೨೧	ಉತ್ತರ ಕನ್ನಡ	೧	೧೨	—	೧
	ಒಟ್ಟು	೪೨೨	೫೨೧	೪೪೮	೧೦೪

ಕೃಷ್ಣಾ ನದಿಯ ನೀರಿನ ಬಳಕೆ

೪೬೭. **ಶ್ರೀ ಆರ್. ರಾಮಯ್ಯ** (ಹಿರಿಯೂರು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಯ ನೀರಿನ ಬಳಕೆಗೆ ನೇಮಿಸಿದ್ದ ಬಚಾವತ್ ಪರದಿಯ ವಿವರವೇನು ;

ಆ) ಗಾಜ್ಜಕ್ಕೆ ಇದರಿಂದ ಎಷ್ಟು ಟಿ.ಎಂ.ಸಿ. ನೀರು ಸೊರೆಯುತ್ತದೆ; ಈ ನೀರಿನ ಬಳಕೆಗಾಗಿ ಯಾವ ಯೋಜನೆಯನ್ನು ತಯಾರು ಮಾಡಲಾಗಿದೆ, ಅದರಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಇದೆಯೆ, ಇದ್ದಲ್ಲಿ ವಿವರ ನೀಡುವುದು ?

ಇ) ಬಚಾವತ್ ಶೀರ್ಮಾನದ ಪ್ರಕಾರ ಈ ನೀರಿನ ಉಪಯೋಗ ಪಡೆಯಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಸ್ಕೀಮ್ 'ಎ' ನಲ್ಲಿ ಬಚಾವತ್ ನದಿಯ ಪ್ರಕಾರ ವಿವಿಧ ರಾಜ್ಯಗಳಿಗೆ ಹಂಚಿರುವ ನೀರಿನ ಪ್ರಕರಣ :

೧.	ಕರ್ನಾಟಕ	೭೩೪ ಟಿಎಂಸಿ
೨.	ಆಂಧ್ರ ಪ್ರದೇಶ	೪೧೧ ಟಿಎಂಸಿ
೩.	ಮಹಾರಾಷ್ಟ್ರ	೫೮೫ ಟಿಎಂಸಿ

ಆ) ಕರ್ನಾಟಕಕ್ಕೆ ೭೩೪ ಟಿಎಂಸಿ ದೊರೆಯಂತ್ತಿದ್ದು ಈ ನೀರನ್ನು ಉಪಯೋಗಿಸಿಕೊಳ್ಳಲು ಶಯಾರಿಸಿರುವ ಮಾಸ್ಟರ್ ಪ್ಲಾನ್‌ನ ವಿವರ ಕೆಳಗಿನಂತಿದೆ :

೧.	ಈಗಾಗಲೇ ಮುಗಿದಿರುವ ಯೋಜನೆಗಳು	೩೯೮.೮೪ ಟಿಎಂಸಿ
೨.	ನಿರ್ಮಾಣ ಹಂತದಲ್ಲಿರುವ ಯೋಜನೆಗಳು	೨೫೮.೫೪ ಟಿಎಂಸಿ
೩.	ಮುಂದೆ ನಿರ್ಮಾಣ ಮಾಡಲಿರುವ ಯೋಜನೆಗಳು	೮೭.೪೨ ಟಿಎಂಸಿ
	ಒಟ್ಟು	೭೩೪ ಟಿಎಂಸಿ

ಭದ್ರಾ ಮೇಲ್ದಂಡೆ ಯೋಜನೆಗೆ ೮ ಟಿಎಂಸಿ ನೀರನ್ನು ಕಾದಿರಿಸಲಾಗಿದ್ದು ಯೋಜನೆಯು ಅನ್ವೇಷಣೆಯಲ್ಲಿದೆ.

ಇ) ಹೌದು

ದೇವನೂರು ಎಡ ಮತ್ತು ಬಲದಂಡೆ ನಾಲೆ ಕೆಲಸದ ಬಗ್ಗೆ

೩೪೨. ಶ್ರೀಪತಿ ಸುಮಾ ವಸಂತ (ವೀರಾಜಪೇಟೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆ ವೀರಾಜಪೇಟೆ ತಾಲ್ಲೂಕಿನ ದೇವನೂರು ಗ್ರಾಮದಲ್ಲಿ ನಿರ್ಮಿಸಲಾದ ದೇವನೂರು ಎಡ ಮತ್ತು ಬಲದಂಡೆ ನಾಲೆ ಕೆಲಸ ಯಾವ ಹಂತದಲ್ಲಿದೆ ;

ಆ) ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದು ನಿಜವೆ ;

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು ;

ಈ) ಈ ಮೇಲ್ಕಂಡ ಕೆಲಸ ಪ್ರಾರಂಭ ವಾದದ್ದು ಯಾವಾಗ ಹಾಗೂ ಇದಕ್ಕೆ ಈವರೆಗೆ ಎಷ್ಟು ವೆಚ್ಚವಾಗಿದೆ ;

ಉ) ವೀರಾಜಪೇಟೆಯ ವಡ್ಡರಪಾಡು ಕಟ್ಟೆಯ ಕೆಲಸ ಯಾವ ಹಂತದಲ್ಲಿದೆ ;

ಊ) ಈವರೆಗೆ ಈ ಕಟ್ಟೆಗೆ ಖರ್ಚಾದ ಹಣವೆಷ್ಟು, ಇದನ್ನು ಯಾವಾಗ ಪೂರ್ಣ ಮಾಡ ಲಾಗುವುದು ಹಾಗೂ ಈ ಕಟ್ಟೆಗೆ ೧೯೮೭–೮೮ಕ್ಕೆ ಮಂಜೂರಾದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಈ ಕೆಲಸವು ೧೯೧೮ ರಲ್ಲಿಯೇ ನಿರ್ಮಾಣವಾಗಿರುತ್ತೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈ ಕೆಲಸವು ೧೯೧೮ರಲ್ಲಿಯೇ ನಿರ್ಮಾಣವಾಗಿರುವುದರಿಂದ ಮಾಹಿತಿಗಳು ಲಭ್ಯವಿರುವುದಿಲ್ಲ

ಉ) ಏರಿ ಮತ್ತು ಕೋಡಿ ಕೆಲಸವು ಪೂರ್ಣಗಿದಿದ್ದು, ಕಾಲುವೆ ನಿರ್ಮಾಣದ ಸಮಯದಲ್ಲಿ ಭೂಸ್ವಾಧೀನತೆಯ ತೊಂದರೆಯಿಂದಾಗಿ ಕೆಲಸವು ಸ್ಥಗಿತಗೊಂಡಿದೆ.